






# ದಶಾ ಸ್ಮರಣಂ

## ಸ್ವಯಂಪ್ರಕಾಶ ದಶಮಾನೋತ್ಸವ ಸಂಚಿಕೆ






# DASHAA SMARANAM

**10 YEAR COMMEMORATION SOUVENIR**

# ಋಷಿಗಳ ರಾಷ್ಟ್ರಾಭಿಮಾನ

ಮಹಾಮಹೋಪಾಧ್ಯಾಯ ವಿದ್ವಾನ್ ಎನ್ ರಂಗನಾಥ ಶರ್ಮಾ, ಬೆಂಗಳೂರು

ನಮ್ಮ ಕನ್ನಡನಾಡಿನಲ್ಲಿ ವೇದ - ಶಾಸ್ತ್ರ - ಸಂಸ್ಕೃತ - ಕನ್ನಡಗಳಲ್ಲಿ ತಲಸ್ಪರ್ಶಿಯಾದ ಪಾಂಡಿತ್ಯ, ಸರಳ - ಸೌಜನ್ಯಪೂರ್ಣ ನಡೆನುಡಿಯ, ಧೀಮಂತ ಹಿರಿಯ ವ್ಯಕ್ತಿ ಮಹಾಮಹೋಪಾಧ್ಯಾಯ ವಿದ್ವಾನ್ ಎನ್ ರಂಗನಾಥ ಶರ್ಮಾರವರು ಸ್ವಯಂಪ್ರಕಾಶದ ಪ್ರಾರಂಭದ ವರ್ಷಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನು ನೀಡಿ ಆಶೀರ್ವದಿಸುತ್ತ ಈ ವಯೋವೃದ್ಧರು ಪತ್ರಿಕೆಯ ಮೇಲಿನ ಅಭಿಮಾನದಿಂದ ಈ ವಿಚಾರಪೂರ್ಣ ಲೇಖನವನ್ನು ಬರೆದು ನಮಗೆ ಕಳುಹಿಸಿಕೊಟ್ಟಿರುವ ಪರಿಶ್ರಮಕ್ಕಾಗಿ ಅವರಿಗೆ ಗೌರವಪೂರ್ಣ ಅಭಿವಾದನ ಸಲ್ಲಿಸುತ್ತೇನೆ. - ಸಂಪಾದಕ

**ರಾಷ್ಟ್ರವೆಂಬ** ಶಬ್ದವು ದೇಶ, ರಾಜ್ಯ, ಪ್ರಾಂತ ಎಂಬ ಶಬ್ದಗಳಿಗಿಂತ ಹೆಚ್ಚು ವ್ಯಾಪಕವಾದ ಅರ್ಥವನ್ನು ಕೊಡುತ್ತದೆ. ರಾಷ್ಟ್ರದಲ್ಲಿ ದೇಶ, ರಾಜ್ಯ, ಪ್ರಾಂತಗಳು ಅಡಕವಾಗುತ್ತವೆ. ಕರ್ನಾಟಕ ದೇಶ, ಕರ್ನಾಟಕ ರಾಜ್ಯ, ಕರ್ನಾಟಕ ಪ್ರಾಂತ ಎಂದು ಹೇಳಬಹುದು. ಆದರೆ ಕರ್ನಾಟಕ ರಾಷ್ಟ್ರ ಎಂದು ಕರೆಯಲಾಗುವುದಿಲ್ಲ. ಒಂದೇ ಬಗೆಯ ಸಂಸ್ಕೃತಿ, ವಿಚಾರಶೀಲತೆ, ಆಶೋತ್ತರಗಳಿಂದ ಕೂಡಿದ ಪ್ರಜಾಸಮುದಾಯವಿರುವ ಮತ್ತು ರಾಜಕೀಯವಾಗಿ ಒಂದೇ ಆಡಳಿತಕ್ಕೆ ಒಳಪಟ್ಟಿರುವ ವಿಶಾಲವಾದ ಭೂಖಂಡವನ್ನು ಸಾಮಾನ್ಯವಾಗಿ ರಾಷ್ಟ್ರ ಎನ್ನಬಹುದು. ರಾಜಕೀಯದ ಏಕತೆಗಿಂತ ಸಂಸ್ಕೃತಿ, ವಿಚಾರಗಳ ಏಕತೆಯೇ ಇಲ್ಲಿ ಮುಖ್ಯವಾದದ್ದು. ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಭೂಭಾಗವು ಒಂದು ರಾಷ್ಟ್ರವೆಂದು ಪ್ರಸಿದ್ಧವಾಗಿದೆ. ಇಲ್ಲಿ ಅನೇಕ ಭಾಷೆಗಳಿದ್ದರೂ ಜನರ ಸಂಸ್ಕೃತಿ, ವಿಚಾರ, ನಂಬಿಕೆ ಇವುಗಳಲ್ಲಿ ಏಕ ಸೂತ್ರತೆ ಸ್ಥಿರವಾಗಿ ನೆಲೆಸಿತ್ತು. ಇದಕ್ಕೆ ಕಾರಣ ವೇದವಾಙ್ಮಯದ ಮಹಿಮೆ ಮತ್ತು ಸಂಸ್ಕೃತ ಭಾಷೆಯ ಸಾರ್ವತ್ರಿಕ ವ್ಯಾಪ್ತಿಯೇ ಸರಿ. ಮುಖ್ಯವಾಗಿ ಭರತಖಂಡದ ವಿಭಿನ್ನ ಪ್ರಾಂತಗಳನ್ನು ಮುತ್ತುಗಳಂತೆ ಪೋಣಿಸಿ ಏಕಸೂತ್ರತೆಯಲ್ಲಿ ಶಾಶ್ವತವಾಗಿ ಹಿಡಿದಿಟ್ಟ ಕೀರ್ತಿ ಸಂಸ್ಕೃತ ಭಾಷೆಗೆ ಸಲ್ಲುತ್ತದೆ.

ಬರಿಯ ನೆಲ, ಬೆಟ್ಟ, ಕಾಡುಗಳು ಮಾತ್ರವೇ ರಾಷ್ಟ್ರವೆನಿಸುವುದಿಲ್ಲ. ಅಲ್ಲಿ ನೆಲೆಸಿರುವ ಪ್ರಜಾಸಮುದಾಯವೇ ರಾಷ್ಟ್ರದ ಜೀವಾಳ. ಒಂದೇ ಬಗೆಯ ಧ್ಯೇಯವುಳ್ಳ ಅಥವಾ ಸಮಾನ ಸಂಸ್ಕೃತಿಯುಳ್ಳ ಜನಸಮುದಾಯವು ನೆಲಸಿರುವ ಭೂಖಂಡವನ್ನು ಒಂದು ರಾಷ್ಟ್ರವೆಂದು ವ್ಯವಹರಿಸುತ್ತೇವೆ. ಜನಪದವೆಂಬ ಇನ್ನೊಂದು ಶಬ್ದವೂ ಕೂಡ ರಾಷ್ಟ್ರವೆಂಬ ಅರ್ಥದಲ್ಲಿ ಬಳಸಬಹುದಾದದ್ದು.

ವಿಷ್ಣುಪುರಾಣವು ರಾಷ್ಟ್ರಪ್ರೇಮಾತಿಶಯದಿಂದ ಹೀಗೆ ಹೇಳಿದೆ:-

**ಅತ್ರ ಜನ್ಮ ಸಹಸ್ರಾಣಾಂ ಸಹಸ್ರೈರಪಿ ಸತ್ತಮ ।**
**ಕದಾಚಿಲ್ಲಭತೇ ಜಂತುಃ ಮಾನುಷ್ಯಂ ಪುಣ್ಯ ಸಂಚಯಾತ್ ॥**
**ಗಾಯಂತಿ ದೇವಾಃ ಕಿಲ ಗೀತಕಾನಿ ಧನ್ಯಾಸ್ತು ಯೇ ಭಾರತಭೂಮಿಭಾಗೇ ।**
**ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥**

''ಸಾವಿರಾರು ಜನ್ಮಗಳಲ್ಲಿ ಪುಣ್ಯವಿಶೇಷದಿಂದ ಯಾವುದೋ ಒಂದು ಜನ್ಮ ಮನುಷ್ಯನಿಗೆ ಈ ಭಾರತ ಭೂಮಿಯಲ್ಲಿ ಲಭಿಸುತ್ತದೆ. ಇಲ್ಲಿ ಹುಟ್ಟಿದವರೇ ಧನ್ಯರು ಎಂದು ದೇವತೆಗಳು ಹಾಡಿಹೊಗಳುತ್ತಾರೆ. ಯಾಕೆಂದರೆ ಈ ಭರತ ಖಂಡವು ಸ್ವರ್ಗ ಮತ್ತು ಮೋಕ್ಷಗಳಿಗೆ ಮಾರ್ಗವನ್ನು ತೋರಿಸುತ್ತದೆ. ದೇವತಾ ಜನ್ಮ ಕಳೆದ ನಂತರ ಅವರು ಮತ್ತೆ ಇಲ್ಲಿ ಮನುಷ್ಯರಾಗಿ ಹುಟ್ಟುತ್ತಾರೆ.

ವಿಷ್ಣು ಪುರಾಣ - 2-3-23, 24

ಮನುಷ್ಯನು ತನ್ನ ಅಭ್ಯುದಯ ನಿಃಶ್ರೇಯಸ್ಸುಗಳನ್ನು ಸಾಧಿಸಲು ಭಾರತ ಭೂಮಿಯಷ್ಟು ಪ್ರಶಸ್ತವಾದ ಸಾಧನ ಕ್ಷೇತ್ರ ಇನ್ನೊಂದಿಲ್ಲ. ಋಷಿಗಳ ರಾಷ್ಟ್ರಾಭಿಮಾನ ಎಷ್ಟು ದೊಡ್ಡದು! ಆದರೆ ಇಂದು ಭರತಖಂಡದ ಪರಿಸ್ಥಿತಿ ಹೇಗಿದೆ?

ಶ್ರೀ ಸೂಕ್ತದಲ್ಲಿ:-

**''ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ''** ''ನಾನು ಈ ಭಾರತ ರಾಷ್ಟ್ರದಲ್ಲಿ ಹುಟ್ಟಿದ್ದೇನೆ. ಕಾರಣ ನನಗೆ ಯಶಸ್ಸನ್ನೂ, ಸಮೃದ್ಧಿಯನ್ನೂ ಶ್ರೀದೇವಿಯು ಅನುಗ್ರಹಿಸಲಿ'' ಎಂಬುದಾಗಿ ಪ್ರಾರ್ಥನೆ ಕಂಡುಬರುತ್ತದೆ. ಅಥರ್ವವೇದದ ಪೃಥ್ವೀಸೂಕ್ತದಲ್ಲಿ ಮಂತ್ರದ್ರಷ್ಟಾರರಾದ ಋಷಿಗಳ ರಾಷ್ಟ್ರಾಭಿಮಾನವು ಪವಿತ್ರ ಗಂಗಾ ಪ್ರವಾಹದಂತೆ ಹರಿಯುತ್ತಿರುವುದನ್ನು ಗುರುತಿಸಬಹುದು.

**''ಮಾತಾ ಭೂಮಿಃ ಪುತ್ರೋಽಹಂ ಪೃಥಿವ್ಯಾಃ''** ಎಂಬೀ ಮಂತ್ರವು ನಮ್ಮ ಮಾತೃಭೂಮಿ, ತಾಯಿನಾಡು ಎಂಬೀ ವ್ಯವಹಾರಕ್ಕೆ ಪ್ರೇರಕವಾಯಿತು. ''ಸತ್ಯ, ಋತ, ತಪಸ್ಸು, ದೀಕ್ಷೆ, ಪರಮೇಶ್ವರ, ಯಜ್ಞ - ಇವು ನಮ್ಮ ಈ ಭೂಮಿಯನ್ನು ಧರಿಸಿವೆ. ಹಿಂದೆ ಇದ್ದ ಇಂದು ಇರುವ ಮತ್ತು ಮುಂದೆ ಹುಟ್ಟುವ ಸಕಲ ಪ್ರಾಣಿವರ್ಗವನ್ನೂ ಈ ಪೃಥ್ವಿಯು ಪಾಲಿಸುತ್ತದೆ. ಇದು ವಿಸ್ತಾರವಾಗಲಿ'' ಎಂದು ಮುಂತಾಗಿ ಈ ರಾಷ್ಟ್ರದ ಬಗೆಗೆ ನಮ್ಮ ಪ್ರಾಚೀನ ಋಷಿಗಳ ಮಹೋನ್ನತವಾದ ಸಾತ್ವಿಕ ಆಶಯಗಳು ಪೃಥ್ವೀಸೂಕ್ತದಲ್ಲಿ ವ್ಯಕ್ತವಾಗಿವೆ. ಐತರೇಯ ಬ್ರಾಹ್ಮಣದಲ್ಲಿ **''ಸಮುದ್ರಪರ್ಯಂತಾಯೈ ಪೃಥಿವ್ಯೈವ ಏಕರಾಟ್''** ಇಡೀ ಭಾರತಭೂಮಿಗೆ ಒಬ್ಬನೇ ಸಮ್ರಾಟ್ ಇರಲಿ ಎಂಬುದಾಗಿ ಹಾರೈಕೆ ಕಂಡುಬರುತ್ತದೆ. **''ಆಸಮುದ್ರಕ್ಷಿತೀಶಾನಾಂ''** ಎಂಬ ಕಾಳಿದಾಸನ ಮಾತು ಇಲ್ಲಿ ನೆನಪಾಗುತ್ತದೆ.

ರಾಜನಿರುವುದು ಪ್ರಜೆಗಳಿಗಾಗಿಯೇ ಹೊರತು ಪ್ರಜೆಗಳಿರುವುದು ರಾಜನಿಗಾಗಿ ಅಲ್ಲವೆಂಬುದನ್ನು ವಾಜಸನೇಯ ಸಂಹಿತೆಯ **''ವಿಶಿ ರಾಜಾ ಪ್ರತಿಷ್ಠಿತಃ''** ಎಂಬ ಉಕ್ತಿಯು ಸೂಚಿಸುತ್ತದೆ. ವಿಶಿ ಎಂದರೆ ಪ್ರಜೆಗಳಲ್ಲಿ ಎಂದರ್ಥ. ಪ್ರಜೆಗಳಿಂದ ಆರಿಸಲ್ಪಟ್ಟವನು ರಾಜ ಎಂದು ಅಭಿಪ್ರಾಯ. ರಾಜನಿಗೆ ಪಟ್ಟಾಭಿಷೇಕ ಮಾಡುವ ಕಾಲದಲ್ಲಿ ಋಷಿಗಳು ಅವನಿಗೆ ನೀಡುತ್ತಿದ್ದ ಉಪದೇಶ ಋಗ್ವೇದದಲ್ಲಿದೆ:- ''ಎಲೈ ರಾಜನೇ! ನಾವು ನಿನ್ನನ್ನು ರಾಜ್ಯಪೀಠದಲ್ಲಿ ಸ್ಥಾಪಿಸಿದ್ದೇವೆ. ನೀನು ಇಲ್ಲಿ ಸ್ಥಿರನಾಗಿರು, ಸಕಲ ಪ್ರಜೆಗಳೂ ನಿನ್ನನ್ನು ಬಯಸಿ ಪ್ರೀತಿಸುವಂತಾಗಲಿ, ಚಂಚಲನಾಗಬೇಡ, ನಿನ್ನಿಂದ ರಾಷ್ಟ್ರವು ಭ್ರಷ್ಟವಾಗಬಾರದು. ರಾಷ್ಟ್ರವು ನಿನ್ನಿಂದ ದೂರವಾಗದಿರಲಿ. ನೀನು ಇಲ್ಲಿಯೇ ಸ್ಥಿರನಾಗಿರು. ಪರ್ವತದಂತೆ ಅಚಲನಾಗಿರು, ಇಂದ್ರನಂತೆ ಪ್ರತಾಪಿಯಾಗಿ ರಾಷ್ಟ್ರವನ್ನು ರಕ್ಷಿಸು. ಆಕಾಶ, ಪೃಥಿವೀ, ಪರ್ವತಗಳು ಹೇಗೆ ಸ್ಥಿರವಾಗಿವೆಯೋ, ಹಾಗೆ ನೀನು ನಿನ್ನ ಕರ್ತವ್ಯದಲ್ಲಿ ಸ್ಥಿರನಾಗು''

(ಋಗ್ವೇದ 10 -17-3)

ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಋಷಿಗಳು ವಿಶೇಷವಾಗಿ ಶ್ರಮಿಸಿದ್ದರೆಂಬುದನ್ನು **''ಭದ್ರಮಿಚ್ಛಂತ ಋಷಯಃ''** ಎಂಬೀ ಮಂತ್ರವು ತಿಳಿಸುತ್ತದೆ. ''ಆತ್ಮಜ್ಞಾನಿಗಳಾದ ಋಷಿಗಳು ಸಕಲರ ಕಲ್ಯಾಣವನ್ನು ಬಯಸತಕ್ಕವರಾಗಿ ಪೂರ್ವದಲ್ಲಿ ತಪೋದೀಕ್ಷೆಯನ್ನು ತೊಟ್ಟರು. ಆದರಿಂದ ರಾಷ್ಟ್ರದ ನಿರ್ಮಾಣವಾಯಿತು. ರಾಷ್ಟ್ರದಲ್ಲಿ ಬಲ - ಪರಾಕ್ರಮಗಳು ಹೆಚ್ಚಿದವು. ಆದ್ದರಿಂದ ಈ ರಾಷ್ಟ್ರಕ್ಕಾಗಿ ವಿದ್ವಾಂಸರು, ತಿಳಿವಳಿಕೆಯುಳ್ಳ ಪ್ರಜೆಗಳು, ನಮ್ರತೆಯಿಂದ ನಡೆದುಕೊಳ್ಳಬೇಕು'' ಈ ಮಾತನ್ನು ಇಂದು ಪ್ರಜೆಗಳೂ ವಿಶೇಷವಾಗಿ ಪ್ರಜಾಪ್ರತಿನಿಧಿಗಳು ಗಮನಿಸಬೇಕು. **''ತಪೋದೀಕ್ಷೆ''** ಎಂದರೆ ವೈಯಕ್ತಿಕವಾದ ಎಲ್ಲ ಬಗೆಯ ಸುಖವನ್ನು ತ್ಯಾಗಮಾಡಿ ಏಕನಿಷ್ಠೆಯಿಂದ ಸತತವಾಗಿ ರಾಷ್ಟ್ರಕಾಗಿ, ದೇಶಕ್ಕಾಗಿ, ಪ್ರಜೆಗಳಿಗಾಗಿ ದುಡಿಯಬೇಕಾದ ನಿಷ್ಕಾಮ ಕರ್ಮಯೋಗ. ಅದು ಜ್ಞಾನಪೂರ್ವಕವಾದದ್ದು, ತಪಃಶಬ್ದಕ್ಕೆ ಜ್ಞಾನವೆಂದೂ ಅರ್ಥವಿದೆ. ಇಂತಹ ಜ್ಞಾನಪೂರ್ವಕವಾದ, ನಿರಂತರವಾದ,

ನಿಷ್ಕಾಮಕರ್ಮಯೋಗದಿಂದಲೇ ರಾಷ್ಟ್ರನಿರ್ಮಾಣ ಸಾಧ್ಯ. ಪುರಾತನ ಋಷಿಗಳ ತಪೋದೀಕ್ಷೆಯಿಂದ ರೂಪುಗೊಂಡ ರಾಷ್ಟ್ರ ಭಾರತ. ಋಷಿಗಳು ಹಾಕಿಕೊಟ್ಟ ಕಟ್ಟುಪಾಡುಗಳಿಗೆ ಒಳಪಟ್ಟು ಧರ್ಮದಿಂದ ಪ್ರಜಾಪಾಲನೆ ಮಾಡಬೇಕೆಂಬ ಎಚ್ಚರಿಕೆಯನ್ನಿಲ್ಲಿ ಕೊಡಲಾಗಿದೆ. ಪ್ರಜಾಪ್ರತಿನಿಧಿಗಳು ಗಮನಿಸಬೇಕಾದದ್ದು ಸೂಕ್ತ.

ಹಿಂದೊಂದು ಕಾಲದಲ್ಲಿ ರಾಜನಾಗಲಿ ಸರಕಾರವಾಗಲಿ ಇರಲಿಲ್ಲವೆಂದೂ ಪ್ರಜೆಗಳು ಪರಸ್ಪರ ಸಹಕರಿಸಿ ಧರ್ಮದಿಂದಲೇ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಿದ್ದರೆಂದು ಮಹಾಭಾರತದಲ್ಲಿ ಹೇಳಿದೆ. ಆದರೆ ಮುಂದೆ ಜನಸಂಖ್ಯೆ ಬೆಳೆಯುತ್ತ ಹೋದಾಗ, ನಾನಾ ವಾಣಿಜ್ಯವೃತ್ತಿಗಳೂ, ಜೀವನ ಮಾರ್ಗಗಳೂ ವಿಸ್ತರಿಸಿದಾಗ, ಪರದೇಶಗಳಿಂದ ಬಂದು ಇಲ್ಲಿ ನುಗ್ಗುವ ದುಸ್ಯುಗಳ ಕಾಟ ಹೆಚ್ಚುತ್ತಿರುವಾಗ ಜನರಲ್ಲಿ ಸಂಘಟನೆಯೂ. ನಿಯಮಪಾಲನೆಯೂ ಅವಶ್ಯಕವಾಗುತ್ತವೆ. ದಸ್ಯುಗಳೊಡನೆ ಹೋರಾಡಲು ವ್ಯವಸ್ಥಿತವಾದ ಸೇನೆ ಬೇಕಾಗುತ್ತದೆ. ಆಂತರಿಕ ಭದ್ರತೆಯು ಕೇಂದ್ರೀಕೃತವಾಗಬೇಕಾಗುತ್ತದೆ. ಪ್ರಜೆಗಳು ಧರ್ಮಮಾರ್ಗದಿಂದ ಎಡವಿದಾಗ ಅದನ್ನು ತಡೆಯಲು ನಿಯಾಮಕನೊಬ್ಬನು ಬೇಕಾಗುತ್ತಾನೆ. ಇವೇ ಮೊದಲಾದ ಕಾರಣಗಳಿಂದ ರಾಷ್ಟಕ್ಕೆ ಅಧಿನಾಯಕನಾದ ರಾಜನನ್ನು ಕಾಲಕ್ರಮದಲ್ಲಿ ಗೊತ್ತುಮಾಡಿಕೊಳ್ಳಲಾಯಿತು. ಇವೆಲ್ಲ ಪ್ರಜೆಗಳ ಅಪೇಕ್ಷೆಗನುಗುಣವಾಗಿ ನಡೆದ ಪರಿವರ್ತನೆಗಳು. ಸೂಕ್ಷ್ಮದರ್ಶಿಗಳೂ, ಕಾರ್ಯದಕ್ಷರೂ, ಪ್ರಜಾ ಹಿಂತಚಿಂತಕರೂ ಆದ ಋಷಿಗಳು ಈ ಪರಿವರ್ತನೆಯ ಅವಶ್ಯಕತೆಯನ್ನು ಮನಗಂಡು ಪ್ರಜೆಗಳ ಸುಖಾಭ್ಯುದಯಗಳಿಗಾಗಿ ಮತ್ತು ಧರ್ಮದ ರಕ್ಷಣೆಗಾಗಿ ರಾಷ್ಟ್ರನಿರ್ಮಾಣದಲ್ಲಿ ಆಸಕ್ತರಾದರು. ರಾಷ್ಟ್ರದ ರಕ್ಷಣೆಗಾಗಿ ಅವರು ವಿವಿಧ ಪ್ರಯೋಗಗಳನ್ನು ಮಾಡಿದರೆಂದು ಹೇಳಬಹುದಾಗಿದೆ. ಈ ದಿಶೆಯಲ್ಲಿ ಅಂದರೆ ರಾಜ್ಯಶಾಸನದಲ್ಲಿ ಋಷಿಗಳು ನಾನಾ ಪ್ರಕಾರಗಳನ್ನು ತೂಗಿನೋಡಿ ಶಾಸನಕ್ರಮವನ್ನು ನೆಲೆಗೊಳಿಸಿದ್ದರೆನ್ನಬಹುದು.

ಯಜುರ್ವೇದದ ''**ಆ ಬ್ರಹ್ಮನ್.....................**'' ಎಂದು ಆರಂಭವಾಗುವ ಮಂತ್ರವು ''**ವೈದಿಕ ರಾಷ್ಟ್ರಗೀತೆ**''ಯೆಂದು ಗೃಹೀತವಾಗಿದೆ. ಇದರಲ್ಲಿ ವ್ಯಷ್ಟಿ - ಸಮಷ್ಟಿಯ ರೂಪದಲ್ಲಿ ಪ್ರಜೆಗಳ ಹಾಗೂ ಒಟ್ಟು ರಾಷ್ಟ್ರದ ಪುರೋಭಿವೃದ್ಧಿಯನ್ನು ಅಡಕಗೊಳಿಸಿ ಹೀಗೆ ಹಾರೈಸಲಾಗಿದೆ.

''ಹೇ ಪರಮೇಶ್ವರ! ನಮ್ಮ ರಾಷ್ಟ್ರದಲ್ಲಿ ಬ್ರಾಹ್ಮಣನು ಬ್ರಹ್ಮವರ್ಚಸ್ಸಿನಿಂದ ತೇಜಸ್ವಿಯಾಗಿರಲಿ. ರಾಜನು ಶೂರನೂ, ಶತ್ರುಗಳನ್ನು ಬಾಣಗಳಿಂದ ಹೊಡೆದುರುಳಿಸುವ ಮಹಾರಥನೂ ಆಗಿರಲಿ. ಹಸುವು ಹಾಲು ಹಿಂಡುತ್ತಿರಲಿ. ಎತ್ತು ಸಶಕ್ತವಾಗಿ ಭಾರ ಎಳೆಯಲು ಸಮರ್ಥವಾಗಿರಲಿ. ಕುದುರೆಯು ವೇಗಶಾಲಿಯಾಗಿರಲಿ. ಸ್ತ್ರೀಯು ಬುದ್ಧಿವಂತೆಯೂ, ಶೀಲವಂತೆಯೂ ಆಗಿರಲಿ. ಕುಟುಂಬದ ಯಜಮಾನ ಪುರುಷನಿಗೆ ರಥದಲ್ಲಿ ಕುಳಿತು ಜಯಗಳಿಸುವಂತಹ ಹಾಗೂ ಸಭೆಗಳಲ್ಲಿ ಸಂಮಾನ್ಯನಾಗುವಂತಹ ಯುವಕರಾದ ವೀರಪುತ್ರರಿರಲಿ. ನಮ್ಮ ರಾಷ್ಟ್ರದಲ್ಲಿ ಮೋಡವು ಕಾಲಕಾಲಕ್ಕೆ ಮಳೆ ಸುರಿಸಲಿ. ಓಷಧಿಗಳು ಕಾಲಕಾಲಕ್ಕೆ ಬೆಳೆ ಕೊಡುತ್ತಿರಲಿ. ನಮ್ಮೆಲ್ಲರ ಯೋಗಕ್ಷೇಮಗಳು ಸರಿಯಾಗಿ ನಡೆಯಲಿ''

ಈ ಪ್ರಕಾರವಾಗಿ ಋಷಿಗಳು ಲೌಕಿಕ ದೃಷ್ಟಿಯಿಂದ ರಾಷ್ಟದ ಯೋಗಕ್ಷೇಮಗಳನ್ನು ಬಯಸುತ್ತಿದ್ದರೆಂಬುದು ನಾವು ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಋಷಿಗಳಿಗೂ ಸಹ ಲೋಕದೃಷ್ಟಿ ಇತ್ತೆಂದು ಸ್ಪಷ್ಟವಾಗುತ್ತದೆ. ವೈದ್ಯಶಾಸ್ತ್ರ ಶಿಲ್ಪಶಾಸ್ತ್ರ, ಸೂಪಶಾಸ್ತ್ರ ಮೊದಲಾದ ಜನಸಾಮಾನ್ಯರೆಲ್ಲರಿಗೂ ಅವಶ್ಯವಾಗಿ ಬೇಕಾದ ಜೀವನೋಪಯೋಗಿ ವಿದ್ಯೆಗಳನ್ನು ಬರೆದಿಟ್ಟು ಲೋಕಕ್ಕೆ ಉಪಕಾರ ಮಾಡಿದ್ದಾರೆ. ಚಾಣಕ್ಯನ ರಾಜನೀತಿ, ಶುಕ್ರನ ನೀತಿಸಾರ ಮುಂತಾದ ಗ್ರಂಥಗಳು ಲೋಕವನ್ನೇ ಉದ್ದೇಶಿಸಿ ಬರೆದವುಗಳಾಗಿವೆ. ಆದ್ದರಿಂದ ಋಷಿಗಳು ಅಧ್ಯಾತ್ಮ ಮಾರ್ಗವನ್ನು ಅವಲಂಬಿಸಿದವರಾದರೂ ಲೋಕಹಿತವನ್ನು ಕಡೆಗಣಿಸಿದವರಲ್ಲವೆಂಬುದನ್ನು ನಾವು ಗ್ರಹಿಸಬೇಕು.

# ಶೃಂಗಗಿರಿ ಸಾಂಸ್ಕೃತಿಕ ಸಂಘ



ಶ್ರೀ ಸದ್ಗುರುಗಳಿಗೆ ಪ್ರಣಾಮವನ್ನು ಸಲ್ಲಿಸುತ್ತ
ಸ್ವಯಂಪ್ರಕಾಶ ದಶಮಾನೋತ್ಸವಕ್ಕೆ ಶುಭಕೋರುವವರು

दिक्कालाद्यनवच्छिन्नानन्तचिन्मात्रमूर्तये ।
स्वानुभूत्यैकमानाय नमः शान्ताय तेजसे ॥

| | |
|---|---|
| ನಾಗೇಶ ಶರ್ಮಾ | ವಿಶ್ವೇಶ್ವರ ಭಟ್ ಎಂ.ಎಲ್. |
| ವಾಮನ ಭಟ್ | ಜಯಾ ಸೋಮಸುಂದರ್ |
| ಎಸ್.ವಿ. ಗಣೇಶ ಭಟ್, ಭದ್ರಾವತಿ | ಗುರುಮೂರ್ತಿ, ನಾಗವಾನೆ |
| ಶರವಣ ಭಟ್ ಎಂ.ಎಸ್. ಶೃಂಗೇರಿ | ಅಚ್ಯುತ್ ರಾವ್ ಡಿ.ಎಸ್. |
| ಶೇಷಾದ್ರಿ ಸಿ.ಎಸ್. | ಶಶಿಶೇಖರ್ ಎಂ.ಎಲ್. |
| ಶೃಂಗನಾಥ್ | ಸೀತಾರಾಮ ಉಡುಪ |
| ರಮೇಶ್ ಡಿ.ಎಸ್. | ನಾಗರಾಜ್ ವಿ.ಕೆ. |
| ಗೋಪಾಲಕೃಷ್ಣ ಭಟ್ ಎಸ್.ಜಿ. | ರಾಘವೇಂದ್ರ ಸಿರಿಮನೆ |
| ಸುಧೀಂದ್ರ ಕಂಚಿತೋಟ | ರಘುಪತಿ ಶೃಂಗೇರಿ |
| ವೆಂಕಟೇಶ್ ಜಿ.ಎಂ. | ಸತೀಶ್ ಡಿ.ಎಸ್. |
| ಪ್ರಸನ್ನ ಮೂರ್ತಿ ಎನ್.ಜಿ. | ರಾಧಾಕೃಷ್ಣ ಕಲ್‌ಚಾವಡಿ |

PUBLISHER:
SRI SWAYAMPRAKASHA TRUST (R),
SREEMATH, HARIHARAPURA